ಅನುಬಂಧ I

ಕರ್ನಾಟಕ ವಿಧಾನಸಭೆ

ಹನ್ನೊಂದನ್ನೇ ವಿಧಾನಸಭೆ

ಮೂರನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದಪಡಿ) ವಿಧೇಯಕ, 2001
(2001ರ ವಿಧಾನಸಭೆಯ ವಿಧೇಯಕ ಸಂಖ್ಯೆ 15)

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 ನ್ನು 1999ರ ಕರ್ನಾಟಕ ಅಧಿನಿಯಮ, 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧಿನಿಯಮ, 2001 ಎಂದು ಕರೆಯತಕ್ಕದ್ದು.

2. ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. 12ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ, 25) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದಲ್ಲಿ,-

1. 1ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"ಮತ್ತು ಪರಂತು, ನಿರ್ದಿಷ್ಟಪಡಿಸಿದ ಗ್ರಾಹಕರು ಅಥವಾ ಗ್ರಾಹಕರ ವರ್ಗಕ್ಕಾಗಿ ರಾಜ್ಯ ಸರ್ಕಾರವು ಪ್ರಟಿಸಿದ ನೀತಿಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಎರಡನೇ ಪರಂತುಕದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ಹಾಗೂ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಹಾಗೂ ಅಂಥ ಮೊಬಲಗನ್ನು ಯಾವ ಸಮಯದೊಳಗೆ ಸಂದಾಯ ಮಾಡಬೇಕೆಂಬುದನ್ನು ಆಯೋಗವು ನಿರ್ಧರಿಸತಕ್ಕದ್ದು."

3. 13ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(ಎ) (3)ನೇ ಉಪಪ್ರಕರಣದಲ್ಲಿ, "ಕಾರ್ಯಾಚರಣೆಗಳನ್ನು ಹೊದಿರತಕ್ಕದ್ದು ಮತ್ತು ಅದಕ್ಕೆ" ಎಂಬ ಪದಗಳಿಗೆ "ಕಾರ್ಯಾಚರಣೆಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (6)ನೇ ಉಪಪ್ರಕರಣದಲ್ಲಿ, ಎರಡು ಸ್ಥಳಗಳಲ್ಲಿ ಕಂಡು ಬರುವ 'ಅಥವಾ ವಿತರಣೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

4. 19ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 19ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ,-

(ಎ) (ii)ನೇ ಉಪಖಂಡದಲ್ಲಿ "ಮತ್ತು" ಎಂಬ ಪದವನ್ನು ಕೊನೆಯಲ್ಲಿ ಸೇರಿಸತಕ್ಕದ್ದು; ಮತ್ತು

(ಬಿ) (ii)ನೇ ಉಪಖಂಡದ ತರುವಾಯ ಈ ಮುಂದಿನ ಉಪಖಂಡವನ್ನು ಸೇರಿಸತಕ್ಕದ್ದು, ಎಂದರೆ:-

``(iii) ಈ ವಿಷಯದಲ್ಲಿ ಕೆಪಿಸಿಟಿ ಯೊಂದಿಗೆ ಸಮಾಲೋಚಿಸುವುದು."

5. 48ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿ "ಕರ್ನಾಟಕ ಸರ್ಕಾರಿ ವಿದ್ಯುತ್ ಉದ್ಯಮ (ಬಾಕಿ ವಸೂಲಿ) ಅಧಿನಿಯಮ, 1976" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ, ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ (ಬಾಕಿಗಳ ವಸೂಲಿ) ಅಧಿನಿಯಮ, 1976" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-

(ii) 12ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಸಂದಾಯ ಮಾಡಬೇಕಾಗಿರುವ ಮೊಬಲಗನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ii) ಸಣ್ಣ ಪುಟ್ಟ ಸಂದಿಗ್ಧತೆಗಳನ್ನು ತೆಗೆದುಹಾಕುವುದು, ಇದರಿಂದಾಗಿ, ಅಧಿನಿಯಮತಿಯು ವಿದ್ಯುಚ್ಛಕ್ತಿ ಸುಧಾರಣೆಯಲ್ಲಿ ಹೇಳುಲಾದ ಉದ್ದೇಶಗಳೊಂದಿಗೆ ಸುಸಂಗತವಾಗಿರುವುದು;

ಇತರೆ ಕೆಲವು ಅನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು

ಯಕೂಬ್ ಷರೀಫ್
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ 25) ಉದ್ಧೃತ ಭಾಗ

x x x

12. ರಾಜ್ಯ ಸರ್ಕಾರದ ಸಾಮಾನ್ಯ ಅಧಿಕಾರಗಳು.-

(1) x x x

ಮತ್ತು ಪರಂತು, ರಾಜ್ಯ ಸರ್ಕಾರವು ಭಾಗ VIIIರ ಅಡಿಯಲ್ಲಿ ನಿರ್ಧರಿಸಿದ ದರದಲ್ಲಿ (ಟ್ಯಾರಿಫ್) ಯಾವೊಬ್ಬ ಗ್ರಾಹಕನಿಗೆ ಅಥವಾ ಗ್ರಾಹಕರ ವರ್ಗಕ್ಕೆ ಸಹಾಯಧನ ನೀಡಲು ಅಗತ್ಯಪಡಿಸಿದರೆ, ರಾಜ್ಯ ಸರ್ಕಾರವು ಸಹಾಯಧನ ನೀಡಿಕೆಯಿಂದ ಬಾಧಿತನಾದ ವ್ಯಕ್ತಿಗೆ ಪರಿಹಾರವಾಗಿ, ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ, ರಾಜ್ಯ ಸರ್ಕಾರವು ಒದಗಿಸಿದ ಸಹಾಯಧನವನ್ನು ಅನುಷ್ಠಾನಗೊಳಿಸಲು, ಲೈಸೆನ್ಸ್‌ದಾರರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ, ಒಂದು ಷರತ್ತಾಗಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

x x x

13. ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ.-

(1) x x x

ಕೆಪಿಸಿಟಿಯು, ಹೆಚ್ಚಿನ ಆಧಿಕ ವೋಲ್ಟೇಜ್ ರವಾನೆ ವ್ಯವಸ್ಥೆಯ ಕಾರ್ಯಾಚರಣೆಗಳನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಹೊಣೆಯಾಗಿರತಕ್ಕದ್ದು ಮತ್ತು ದಕ್ಷ ರೀತಿಯಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ನಿರ್ವಹಣೆ ಮಾಡತಕ್ಕದ್ದು.

x x x

(6) (1), (2) ಮತ್ತು (3)ನೇ ಉಪ ಪ್ರಕರಣಗಳಿಗೊಳಪಟ್ಟು ಮತ್ತು ಕೆಪಿಟಿಸಿಯ ಒಟ್ಟಾರೆ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟು, ಅಧೀನ ಅಥವಾ ಸಹಭಾಗಿಯಾದ ಅನೇಕ ವಿದ್ಯುಚ್ಛಕ್ತಿ ರವಾನೆ ಅಥವಾ ವಿತರಣೆ ಕಂಪನಿಗಳನ್ನು ರಾಜ್ಯದಲ್ಲಿ ಸ್ಥಾಪಿಸಬಹುದು ಮತ್ತು ಆಯೋಗವು ಕೆಪಿಟಿಸಿಯೊಡನೆ ಸಮಾಲೋಚಿಸಿ, ಈ ಅಧಿನಿಯಮದ ನಿಬಂಧನೆಗಳ ಅಡಿಯಲ್ಲಿ ಅಂಥ ರವಾನೆ ಅಥವಾ ವಿತರಣೆ ಕಂಪನಿಗಳಿಗೆ ಲೈಸೆನ್ಸನ್ನು ನೀಡಬಹುದು.

x x x

48. ಶುಲ್ಕಗಳು, ದಂಡಗಳು ಮತ್ತು ಬಾಜ್ರ್ುಗಳ ವಸೂಲಿ.- ಆಯೋಗವು ಕರ್ನಾಟಕ ಸರ್ಕಾರಿ ವಿದ್ಯುತ್ ಉದ್ಯಮ (ಬಾಕಿ ವಸೂಲಿ) ಅಧಿನಿಯಮ, 1976ರ ಉಪಬಂಧಗಳಿಗೆ ಅನುಸಾರವಾಗಿ ಲೈಸೆನ್ಸ್ಗಳು, ಶುಲ್ಕಗಳು ಅಥವಾ ದಂಡಗಳು ಮತ್ತು ಬಾಜ್ರ್ುಗಳ ರೂಪದಲ್ಲಿ ಈ ಅಧಿನಿಯಮದ ಮೇರೆಗೆ ಅದಕ್ಕೆ ಬಾಕಿ ಇರುವ ಎಲ್ಲಾ ಮೊಬಲಗನ್ನು ಅಂಥ ಯಾವುದೇ ಮೊಬಲಗು ಅಥವಾ ಆ ಅಧಿನಿಯಮದಲ್ಲಿ ಪರಿಭಾಷಿಸಿರುವಂತೆ ಸಾರ್ವಜನಿಕ ಬೇಡಿಕೆಯಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡಲು ಅರ್ಹವಾಗಿರತಕ್ಕದ್ದು ಮತ್ತು ಆ ಮೊಬಲಗನ್ನು ಸಂಬಂಧಪಟ್ಟ ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ವಹಿಸಿಕೊಡತಕ್ಕದ್ದು.